ಕಲಾವಿದರಿಗೆ ಸರ್ಕಾರದ ಹುದ್ದೆಯಲ್ಲಿ ಮೀಸಲಾತಿ

2088 (2191); ಶ್ರೀ ಮಂಕಾಳ ಸುಬ್ಬ ವೈದ್ಯ (ಭಟ್ಕಳ)

1) ರಾಜ್ಯದಲ್ಲಿ ಆಯೋಜಿಸಿರುವ ಯುವಜನಮೇಳ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಥಮ/ದ್ವಿತೀಯ/ ತೃತೀಯ ಸ್ಥಾನ ಪಡೆದ ಕಲಾವಿದರುಗಳಿಗೆ ಸರ್ಕಾರದಿಂದ ಯಾವ ರೀತಿಯ ಸವಲತ್ತುಗಳನ್ನು ನೀಡಲಾಗುತ್ತಿದೆ.

2) ಯುವಕ/ಯುವತಿಯರಿಗೆ ಕಲೆಗಳ ಬಗ್ಗೆ ಆಸಕ್ತಿ ತಳೆಯಲು ಕ್ರೀಡಾ ಇಲಾಖೆಯಲ್ಲಿ ಕ್ರೀಡಾಪಟುಗಳಿಗೆ ನೀಡುವಂತೆ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ನೀಡಲು ಅವಕಾಶವಿದೆಯೇ?

3) ಯುವಜನರಿಗೆ ಕಲೆ ಮತ್ತು ಸಾಂಸ್ಕೃತಿಕ ಹಾಗೂ ಜನಪದ ಕ್ಷೇತ್ರಗಳತ್ತ ಸೆಳೆಯಲು ಯುವಜನ ಮೇಳದಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ರಾಜ್ಯಮಟ್ಟದಲ್ಲಿ ಸ್ಥಾನ ಪಡೆದ ಕಲಾವಿದರಿಗೆ ಸಕಾರಿ ಹುದ್ದೆಯಲ್ಲಿ ಮೀಸಲಾತಿ ನೀಡುವ ವಿಚಾರ ಸರ್ಕಾರದ ಮುಂದಿದೆಯೇ?

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

1) ರಾಜ್ಯದಲ್ಲಿ ಆಯೋಜಿಸಿರುವ ಯುವಜನಮೇಳ ಕಾರ್ಯಕ್ರಮದಲ್ಲಿ ಭಾಗವಹಿಸಿದ ಯುವಕ ಯುವತಿಯರಿಗೆ ವೈಯಕ್ತಿಕ ಹಾಗೂ ಗುಂಪು ಸ್ಪರ್ದೆಯಲ್ಲಿ ನಗದು ಬಹುಮಾನ, ಪ್ರಶಸ್ತಿ ಪತ್ರ ಮತ್ತು ನೆನಪಿನ ಕಾಣಿಕೆಯನ್ನು ನೀಡಲಾಗುವುದು.

ಪ್ರಥಮ, ದ್ವಿತೀಯ ತೃತೀಯ ಹಾಗೂ ಗುಂಪು ಸ್ಪರ್ಧೆಗಳಿಗೆ ನೀಡಲಾದ ನಗದು ಬಹುಮಾನದ ವಿವರ ಕೆಳಕಂಡಂತಿದೆ.

	ಯುವಕ	ಯುವತಿ	ಗುಂಪುಸ್ಪರ್ದೆ
ಪ್ರಥಮ	2,000/–	2,000/–	3,500/–
ದ್ವಿತೀಯ	1,000/–	1,000/–	2,500/–
ತೃತೀಯ	750/–	750/–	1,500/–

2) ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ನೀಡಲು ಅವಕಾಶ ಇರುವುದಿಲ್ಲ.

3) ಸರ್ಕಾರಿ ಹುದ್ದೆಯಲ್ಲಿ ಮೀಸಲಾತಿ ನೀಡುವ ವಿಚಾರ ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ.

ಯುವಕರಿಗೆ ಸಾಂಸ್ಕೃತಿಕ ಕಲೆಗಳ ತರಬೇತಿ ನೀಡುವುದು

2089 (2538); ಶ್ರೀ ಮೋಹಿಯುದ್ದೀನ್ ಬಾವಾ ಬಿ.ಎ.

ಅ) ಯುವಜನರಲ್ಲಿ ಸಾಂಸ್ಕೃತಿಕ ಕಲಾ ಪ್ರತಿಭೆ ಮೂಡಿಸುವ ನಿಟ್ಟಿನಲ್ಲಿ ಯುವಕ/ ಯುವತಿಯರ ಮಂಡಲಗಳ ಸದಸ್ಯರುಗಳಿಗೆ ಕಲಾ ತರಬೇತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮಗಳನ್ನು ಸರ್ಕಾರ ಕೈಗೊಳ್ಳಲಿದೆ? (ವಿವರ ಒದಗಿಸುವುದು)

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ) ಸಾಂಸ್ಕೃತಿಕ ಕಲಾ ಪ್ರತಿಭೆ ಮೂಡಿಸುವ ನಿಟ್ಟಿನಲ್ಲಿ ಯುವಕ/ಯುವತಿ ಮಂಡಲಗಳ ಸದಸ್ಯರುಗಳಿಗೆ ಕಲಾ ತರಬೇತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.